ದಿನಾಂಕಃ 14-10-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ಘಟನಾ ದಿನದ ಬೆಳಗ್ಗೆಃ08.00 ಗಂಟೆಯಿಂದ ರಾತ್ರಿಃ08.00 ಗಂಟೆಯವರೆಗೆ ನನಗೆ ವಿಶ್ರಾಂತಿ ಸಮಯ ಇತ್ತು. ಆ ಸಮಯದಲ್ಲಿ ನಾನು ಚಿಕ್ಕಮಗಳೂರಿನಲ್ಲಿ ಇದ್ದ ನಮ್ಮ ಮನೆಯಲ್ಲಿ ವಿಶ್ರಾಂತಿ ಪಡೆದಿದ್ದೆನು. ಘಟನಾ ದಿನದಂದು ನಾನು ರಾತ್ರಿ ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ಠಾಣಾ ಡೈರಿಗೆ ನನ್ನ ಸಹಿಯನ್ನು ಹಾಕಿರುವುದಿಲ್ಲ. ನನಗೆ ಬೆಂಗಾವಲಿಗೆ ಹೋಗಲು ನಿರ್ದಿಷ್ಟವಾಗಿ ಲಿಖಿತ ಆದೇಶ ಇರಲಿಲ್ಲ. ನಾನು ಆಸ್ಪತ್ರೆಯಲ್ಲಿ ಆರೋಪಿಯ ಬೆಂಗಾವಲಿಗೆ ಬಂದಿದ್ದೇನೆ ಎಂದು ಆಸ್ಪತ್ರೆಯ ರಿಜಿಸ್ಟರ್ ನಲ್ಲಿ ಸಹಿಯನ್ನು ಮಾಡಿರುವುದಿಲ್ಲ. ಘಟನಾ ದಿನ ಬೆಂಗಾವಲಿನ ಸಮಯದಲ್ಲಿ ನಾನು ಸಮವಸ್ತ್ರ ಧರಿಸಿದ್ದೆನು. ನಮಗೆ ರಕ್ಷಣೆಗೆಂದು ಗನ್ ನೀಡಿರುವುದಿಲ್ಲ.

ನಾನು ಆಸ್ಪತ್ರೆಗೆ ಬೆಂಗಾವಲಿಗೆಂದು ಹೋಗುವ ಪೂರ್ವದಲ್ಲಿ ಚೇತನ್ ಎನ್ನುವವರು ಬೆಂಗಾವಲಿನ ಕರ್ತವ್ಯದಲ್ಲಿ ಇದ್ದರು. ಸದರಿ ಚೇತನ್ ರವರು ಬೆಂಗಾವಲಿನ ಕರ್ತವ್ಯದಿಂದ ಬಿಡುಗಡೆ ಹೊಂದಿ ನಾನು ಆ ಕರ್ತವ್ಯಕ್ಕೆ ನೇಮಕಗೊಂಡಿರುತ್ತೇನೆ ಎಂದು ಹೇಳುವ ಯಾವುದೇ ಪೊಲೀಸ್ ದಾಖಲೆಗಳು ಇರುವುದಿಲ್ಲ. ಆರೋಪಿಗೆ ಸದರಿ ದಿನ ಚಿಕಿತ್ಸೆ ನೀಡಿರುವ ವೈದ್ಯರ ಹೆಸರು ಹಾಗೂ ನರ್ಸ್ ಹೆಸರು ಹೇಳಲು ನನಗೆ ಆಗುವುದಿಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ವೈದ್ಯರು ರಾತ್ರಿ ಸಮಯ ಭೇಟಿ ನೀಡುವುದಿಲ್ಲ. ಸದರಿ ಚೇತನ್ ರವರು ಆಸ್ಪತ್ರೆಯಿಂದ ವಾಪಾಸ್ ಹೋಗುವ ಸಮಯದಲ್ಲಿ ಆರೋಪಿಗೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ.

ಅದೇ ರೀತಿ ಕರ್ತವ್ಯಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆ ನೀಡಿರುವುದಿಲ್ಲ. ಆದರೆ ಹ್ಯಾಂಡ್ ಕಫ್ ನೀಡಿರುತ್ತಾರೆ. ನಾವು ಆರೋಪಿಯ ಬೆಂಗಾವಲಿನಲ್ಲಿ ಇದ್ದಾಗ ಆರೋಪಿಯ ಚಲನವಲನವನ್ನು ಗಮನವಿಟ್ಟು ನೋಡಬೇಕಾಗುತ್ತದೆ ಹಾಗೂ ನಿದ್ದೆ ಮಾಡುವ ಅವಕಾಶ ಇರುವುದಿಲ್ಲ ಎಂದರೆ ಸರಿ. ನಾನು ನೈಟ್ ಡ್ಯೂಟಿಯ ಚಾರ್ಜ್ ತೆಗೆದುಕೊಳ್ಳುವ ಸಮಯದಲ್ಲಿ ಆರೋಪಿಗೆ ಹಾಕಲಾಗಿದ್ದ ಹ್ಯಾಂಡ್ ಕಫ್ ಸರಿಯಾಗಿ ಹಾಕಲಾಗಿತ್ತೋ ಇಲ್ಲವೋ ಎಂದು ಪರಿಶೀಲಿಸಿರುತ್ತೇನೆ.

ಎಂ.ಜಿ. ಆಸ್ಪತ್ರೆ ಸುಮಾರು 10 ರಿಂದ 15 ಎಕರೆ ಇರುವಂತಹ ಆಸ್ಪತ್ರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ಪತ್ರೆಯಲ್ಲಿ 24 ಗಂಟೆಯೂ ಚಿಕಿತ್ಸೆಯು ಲಭ್ಯವಿದ್ದು ಹಾಗೂ ತುರ್ತು ಚಿಕಿತ್ಸೆಯೂ ಕೂಡಾ ಲಭ್ಯವಿರುತ್ತದೆ ಎಂದರೆ ಇರಬಹುದು. ಸದರಿ ಆಸ್ಪತ್ರೆಯಲ್ಲಿ ಪೊಲೀಸ್ ಚೆಕ್ ಪೋಸ್ಟ್ ಇದೆ ಎಂದರೆ ಸರಿಯಲ್ಲ. ಅಲ್ಲಿ 24 ಗಂಟೆಯೂ ಕೆಲಸ ಮಾಡುವಂತಹ ವೈದ್ಯರು ಇರುತ್ತಾರೆ ಎಂದರೆ ಸಾಕ್ಷಿದಾರರು ಇರಬಹುದು ಎಂದು ನುಡಿಯುತ್ತಾರೆ. ಘಟನಾ ದಿನ ಇಬ್ಬರು ಪೊಲೀಸ್ ಪೇದೆಗಳನ್ನು ಬೆಂಗಾವಲಿಗೆ ನೇಮಕ ಮಾಡಿರುತ್ತಾರೆ ಎಂದರೆ ಸರಿ. ಸದರಿ ಇಬ್ಬರ ಪೈಕಿ ಒಬ್ಬರು ಬೆಂಗಾವಲಿನ ಕರ್ತವ್ಯಕ್ಕೆ ಬಾರದೇ ಇದ್ದ ಬಗ್ಗೆ ನಾನು ಮೇಲಾಧಿಕಾರಿಗಳಿಗೆ ತಿಳಿಸಿರುವುದಿಲ್ಲ. ಸಾಕ್ಷಿದಾರರು ಸ್ವತಃ ನುಡಿಯುತ್ತಾರೆ ಸದರಿಯವರು ಕರ್ತವ್ಯಕ್ಕೆ ಹಾಜರಾಗುತ್ತೇನೆ ಎಂದು ತಿಳಿಸಿದ ಮೇರೆಗೆ ಮೇಲಾಧಿಕಾರಿಗಳಿಗೆ ತಿಳಿಸಿರುವುದಿಲ್ಲ. ಸದರಿ ದಿನ ನಾನು ಸಮವಸ್ತ್ರದಲ್ಲಿ ಇದ್ದೆನು.

ನಾನು ಘಟನಾ ಸಮಯದಲ್ಲಿ ವಾಶ್ ರೂಂ ನ ಒಳಗೆ ಹೋಗಿದ್ದೆನು. ಆರೋಪಿಯ ಕೈಗೆ ಹಾಕಿದ್ದ ಕೋಳದ ಕೀಯನ್ನು ನನ್ನ ಜೇಬಿನಲ್ಲಿ ಇಟ್ಟಿದ್ದೆನು. ನಾನು ಸದರಿ ಕೀಯನ್ನು ಹಾಗೂ ಕೈ ಕೋಳವನ್ನು ಮಹಜರ್ ಸಮಯದಲ್ಲಿ ತನಿಖಾಧಿಕಾರಿ ಮುಂದೆ ಹಾಜರುಪಡಿಸಿರುತ್ತೇನೆ. ನಾನು ರೂಂ ನ ಕೀಯನ್ನು ಮಹಜರ್ ಸಮಯದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ನನ್ನ ದೂರಿನಲ್ಲಿ ಸದರಿ ಕೀಯನ್ನು ಏನು ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತೇನೆ. ಸದರಿ ದಿನ ರೂಂ ನ ಡೋರ್ ಲಾಕ್ ಅನ್ನು ಆಸ್ಪತ್ರೆಯಲ್ಲಿ ಕೆಲಸ ಮಾಡುವ ಒಂದು ಹೆಂಗಸು ತೆಗೆದಿರುತ್ತಾರೆ. ಸದರಿ ಹೆಂಗಸಿನ ಹೆಸರು ನನಗೆ ತಿಳಿದಿರುವುದಿಲ್ಲ.

ಆರೋಪಿಯು ತಪ್ಪಿಸಿಕೊಂಡು ಹೋದ ಸುಮಾರು 4 ರಿಂದ 5 ಗಂಟೆಯ ಅವಧಿಯಲ್ಲಿ ರೂಂ ನ ಲಾಕ್ ಅನ್ನು ತೆಗೆಯಲಾಗಿರುತ್ತದೆ. ರೂಂ ಲಾಕ್ ಅನ್ನು ತೆಗೆದ ನಂತರ ನಾನು ಹೊರಗಡೆ ಬಂದು ಎಸ್.ಹೆಚ್.ಓ ರವರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಆದರೆ ಎಷ್ಟು ಗಂಟೆಗೆ ಎಂದು ನನಗೆ ಈಗ ಹೇಳಲು ನೆನಪಿಲ್ಲ. ಆರೋಪಿಯು ತಪ್ಪಿಸಿಕೊಂಡು ಹೋಗಿದ್ದ ಬಗ್ಗೆ ಆಸ್ಪತ್ರೆಯ ಅಧಿಕಾರಿಗಳಿಗೆ ತಿಳಿಸಿದ್ದನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನಾನು ಸದರಿ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಇದ್ದ ಪೊಲೀಸ್ ಠಾಣೆಗೆ ಫೋನ್ ಮಾಡಿ ತಿಳಿಸಿರುವುದಿಲ್ಲ. ನಾನು ವಾಶ್ ರೂಂ ಒಳಗೆ ಹೋಗುವ ಪೂರ್ವದಲ್ಲಿ ಆರೋಪಿಗೆ ಹಾಕಿದ್ದ ಕೈ ಕೋಳ ಆತನ ಕೈಯಲ್ಲಿ ಇದ್ದುದನ್ನು ನೋಡಿ ನಂತರ ಒಳಗೆ ಹೋಗಿರುತ್ತೇನೆ. ಸದರಿ ಕೈ ಕೋಳವನ್ನು ಕೀ ಇಲ್ಲದೆ ತೆರೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಕೈ ಕೋಳವನ್ನು ಯಾವ ರೀತಿ ಬಿಡಿಸಿರುತ್ತಾನೆ ಎಂದು ನಾನು ನೋಡಿರುವುದಿಲ್ಲ. ಅದರ ಕೀ ನನ್ನ ಜೇಬಿನಲ್ಲಿ

ಇತ್ತು ಎಂದರೆ ಸರಿ. ಆರೋಪಿಯು ನನ್ನನ್ನು ತಳ್ಳುವಾಗ ನಾನು ಅದನ್ನು ತಡೆಯಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರೂಂ ನ ಬಾಗಿಲನ್ನು ತಕ್ಷಣ ದೂಡಿ ಬರಲು ಸಾಧ್ಯವಾಗಿರುವುದಿಲ್ಲ. ಮಹಜರ್ ಅನ್ನು ಮಾರನೇ ದಿನ ಮಾಡಲಾಗಿತ್ತು. ಘಟನಾ ಸ್ಥಳದಿಂದ ಪೊಲೀಸ್ ಠಾಣೆ ಸುಮಾರು 1 ಕಿ.ಮೀ ದೂರದಲ್ಲಿ ಇರುತ್ತದೆ. ಘಟನಾ ಸ್ಥಳದಿಂದ ಠಾಣೆಗೆ ಹೋಗಲು ಸುಮಾರು 20 ರಿಂದ 30 ನಿಮಿಷ ಬೇಕಾಗುತ್ತದೆ. ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ದೂರನ್ನು ನೀಡಿರುವ ಕಾರಣ ಸದರಿ ದೂರನ್ನು ನೀಡಲು ತಡವಾಗಿರುತ್ತದೆ. ಕ್ರೈಂ ನಂ.127/2023 ರಲ್ಲಿ ನಮ್ಮ ಹಿರಿಯ ಅಧಿಕಾರಿಗಳು ಆರೋಪಿಗೆ ಗುಂಡು ಹೊಡೆದು ಅರೆಸ್ಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಅವರನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ಆರೋಪಿಯ ಮಂಡಿ ಚಿಪ್ಪಿಗೆ ಗುಂಡು ಹೊಡೆದು ತೀವ್ರ ಸ್ವರೂಪದ ಗಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾಗ ನನ್ನನ್ನು ಬೆಂಗಾವಲಿಗೆ ನೇಮಿಸಿರುತ್ತಾರೆ ಎಂದರೆ ಸರಿ. ಆರೋಪಿಗೆ ಓಡಾಡಲು ಸಾಧ್ಯವಿಲ್ಲ ಎಂದು ಹೇಳಿ ಅವರಿಗೆ ಮುಂದಿನ ಚಿಕಿತ್ಸೆಗಾಗಿ ದಾಖಲು ಮಾಡಿದ ಸಮಯದಲ್ಲಿ ನನ್ನನ್ನು ಬೆಂಗಾವಲಿಗೆ ನೇಮಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ತೀವ್ರ ಸ್ವರೂಪದ ಗಾಯ ಆಗಿದ್ದುದರಿಂದ ಆತನಿಗೆ ನಡೆದಾಡಲು ಸಾಧ್ಯವಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ಸಹಾಯವಿಲ್ಲದೆ ಆಗಲೂ ಹಾಗೂ ಈಗಲೂ ನಡೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಘಟನಾ ಸ್ಥಳದ ಸುತ್ತಮುತ್ತ ವೈದ್ಯರ ವಸತಿ ಗೃಹ, ತುರ್ತು ಚಿಕಿತ್ಸಾಲಯ ಹಾಗೂ ಪೊಲೀಸ್ ಚೆಕ್ ಪೋಸ್ಟ್ ಅಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಾನು

ಹೊರಗೆ ಬಂದ ನಂತರ ಆರೋಪಿಯು ಎಲ್ಲಿ ಹೋಗಿರುತ್ತಾನೆ ಎಂದು ಅಲ್ಲಿ ಇದ್ದ ವ್ಯಕ್ತಿಗಳನ್ನು ವಿಚಾರಿಸಿರುತ್ತೇನೆ. ಅವರ ಹೆಸರು ನನಗೆ ಹೇಳಲು ಆಗುವುದಿಲ್ಲ. ತುರ್ತು ಚಿಕಿತ್ಸಾಲಯದ ಹತ್ತಿರ ಸಿ.ಸಿ. ಕ್ಯಾಮೆರಾ ಇರುತ್ತದೆ ಎಂದರೆ ಸರಿ. ಆಸ್ಪತ್ರೆಯ ಒಳಗೆ ಬರುವ ಸ್ಥಳದಲ್ಲಿ ಹಾಗೂ ಹೊರಗೆ ಹೋಗುವ ಸ್ಥಳದಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸಲಾಗಿರುತ್ತದೆ ಎಂದರೆ ಇರಬಹುದು. ಆರೋಪಿ ಸದರಿ ದಿನ ಅಲ್ಲಿಂದ ಹೋಗಿರುವ ಬಗ್ಗೆ ಸದರಿ ಸ್ಥಳದಲ್ಲಿ ಸೆಕ್ಯೂರಿಟಿಯವರು ಇಲ್ಲದೇ ಇದ್ದ ಕಾರಣ ವಿಚಾರಿಸಿರುವುದಿಲ್ಲ. ಆಜಾದ್ ಪಾರ್ಕ್, ಬೇಲೂರು ರಸ್ತೆ ಹಾಗೂ ಚಿಕ್ಕಮಗಳೂರು ಬಸ್ ನಿಲ್ದಾಣದ ಬಳಿ ಪೊಲೀಸ್ ಅಧಿಕಾರಿಗಳನ್ನು ವಿಚಾರಿಸಿರುವುದಿಲ್ಲ. ನಾನು 112 ಗೆ ಕರೆ ಮಾಡಿ ವಿಚಾರಿಸಿರುವುದಿಲ್ಲ. ನಾನು ಸದರಿ ದಿನ ಘಟನಾ ಸ್ಥಳದಲ್ಲಿ ಕರ್ತವ್ಯದಲ್ಲಿ ಇದ್ದ ಬಗ್ಗೆ ಹಾಗೂ ಕರ್ತವ್ಯ ನಿರ್ವಹಿಸಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಘಟನೆ ಸದರಿ ಸ್ಥಳದಲ್ಲಿ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನನ್ನು ಬೆಂಗಾವಲಿಗೆ ನೇಮಕ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ನನ್ನನ್ನು ಬಾತ್ ರೂಂ ನಲ್ಲಿ ದೂಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿ ವಿರುದ್ಧ ಒಂದು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

C.C.No.1195/2024
PW-1 CW-1

ಮಾರನೇ ದಿನ ಮಹಜರ್ ಅನ್ನು ತಯಾರಿಸಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

C.C.No.1195/2024
PW-1 CW-1